# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಕೆ.ಕೆ.ಪೂಣಚ್ಚ, ಗ್ರೇಡ್-2 ಕಾರ್ಯದರ್ಶಿ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(ಪ್ರಭಾರ)(ಪ್ರಸ್ತುತ ಕಡ್ಡಾಯ ನಿವೃತ್ತಿ), ಕಣ್ಣಂಗಾಲ ಗ್ರಾಮಪಂಚಾಯಿತಿ, ವಿರಾಜಪೇಟೆ, ಕೊಡಗು ಜಿಲ್ಲೆ ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯ ಬಗ್ಗೆ ಆದೇಶ.

ಓದಲಾಗಿದೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೊಡಗು ಜಿಲ್ಲೆ ರವರ ಆದೇಶ ಸಂಖ್ಯೆ:ಕೊಜಿಪಂ/ಆಡಳಿತ ಸೇವೆ(2)/283/2012-13, ದಿನಾಂಕ:03-03-2018ರ
2. ಶ್ರೀ ಕೆ.ಕೆ.ಪೂಣಚ್ಚ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(ಪ್ರಭಾರ), (ಪ್ರಸ್ತುತ ಕಡ್ಡಾಯ ನಿವೃತ್ತಿ), ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿ ದಿನಾಂಕ:27.03.2018.
3. ಸರ್ಕಾರದಿಂದ ವಿಚಾರಣೆಗೆ ಹಾಜರಾಗಲು ನೀಡಿದ ತಿಳುವಳಿಕೆ ಪತ್ರ ದಿನಾಂಕ:02-05-2018, ಹಾಗೂ 17-09-2018.

ಪ್ರಸ್ತಾವನೆ :

ಶ್ರೀ ಕೆ.ಕೆ.ಪೂಣಚ್ಚ, ಗ್ರೇಡ್-2 ಕಾರ್ಯದರ್ಶಿ, ಹಿಂದಿನ ಪ್ರಭಾರ ಪಿ.ಡಿ.ಓ ಮಾಲ್ದಾರೆ ಗ್ರಾಮ ಪಂಚಾಯತ್, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ, ಇವರು ಮಾಲ್ದಾರೆ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ

1) 2011-12ನೇ ಸಾಲಿನ ಇಂದಿರಾ ಆವಾಸ್ ಯೋಜನೆಯ ಅಸಮರ್ಪಕ ಅನುಷ್ಠಾನ ಹಾಗೂ ಅನುದಾನದ ದುರುಪಯೋಗಪಡಿಸಿಕೊಂಡಿರುತ್ತಾರೆ.
2) 2011-12ನೇ ಸಾಲಿನ ಉದ್ಯೋಗಖಾತ್ರಿ ಯೋಜನೆಯಡಿ ನಿಯಮಬಾಹಿರ ಅನುಷ್ಠಾನ, ಹಣದುರುಪಯೋಗ ಮತ್ತು ಮಾರ್ಗಸೂಚಿಗಳ ಉಲ್ಲಂಘಿಸಿರುತ್ತಾರೆ.
3) ಗ್ರಾ.ಪಂ.ವರ್ಗ-1ರ ಅನುದಾನದಡಿ ನಿಯಮ ಪಾಲಿಸದೇ ಖರೀದಿ, ಮೋಟಾರು ಖರೀದಿ, ಕೊಳವೆ ಬಾವಿ ದುರಸ್ಥಿ ಮೂಲಕ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ.
4) ಗ್ರಾಮ ಪಂಚಾಯಿತಿ ಅನುಮೋದನೆ ಪಡೆಯದೇ ಬೀದಿದೀಪ ಸಾಮಗ್ರಿ ಹಾಗೂ ವಿದ್ಯುತ್ ಬಿಡಿ ಭಾಗಗಳ ಖರೀದಿಯಲ್ಲಿ ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆ.
5) 13ನೇ ಹಣಕಾಸು ಯೋಜನೆಯಡಿ ರೂ.2,67,254/-ಗಳ ಅನುದಾನವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂಬ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ಇಲಾಖಾ ವಿಚಾರಣೆ ಕಾಯ್ದಿರಿಸಿ ಸದರಿ ನೌಕರರನ್ನು ಅಮಾನತ್ತುಗೊಳಿಸಿ ಆದೇಶಿಸಲಾಗಿತ್ತು.

ವಿಚಾರಣಾಧಿಕಾರಿಗಳು ದಿನಾಂಕ:21-05-2016ರಂದು ವರದಿಯನ್ನು ಸಲ್ಲಿಸಿದ್ದು, ಮೇಲ್ಕಂಡ ಆರೋಪಗಳು ಸಾಬೀತಾಗಿರುವುದಾಗಿ ವರದಿ ಮಾಡುತ್ತಾ, ರೂ.65,076/-ಗಳನ್ನು ವಸೂಲಾತಿಗಾಗಿ ಶಿಫಾರಸ್ಸು ಮಾಡಿರುತ್ತಾರೆ.

ಆಪಾದಿತ ನೌಕರರು ತಮ್ಮ ಲಿಖಿತ ಸಮಾಜಾಯಿಷಿಯಲ್ಲಿ ತಮ್ಮ ಆರೋಪಗಳನ್ನು ಒಪ್ಪಿಕೊಂಡಿರುವುದರಿಂದ ಹಾಗೂ ಮುಖ್ಯವಾಗಿ ಸದರಿ ನೌಕರರು ಕರ್ತವ್ಯ ನಿರ್ವಹಿಸಿದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿಯು ನಿಯಮ ಉಲ್ಲಂಘಿಸಿ ಪದೇ ಪದೇ ಹಣ ದುರುಪಯೋಗ ಮಾಡಿರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಆದೇಶ ಸಂಖ್ಯೆ:ಕೊಜಿಪಂ/ಆಡಳಿತ ಸೇವೆ(2)/283/2012-13, ದಿನಾಂಕ:03-03-2018ರ ಆದೇಶದಲ್ಲಿ-

> "ಶ್ರೀ ಕೆ.ಕೆ.ಪೂಣಚ್ಚ, ಗ್ರೇಡ್-2 ಕಾರ್ಯದರ್ಶಿ ಇವರಿಗೆ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿರುತ್ತಾರೆ ಹಾಗೂ ದುರುಪಯೋಗ ಮೊತ್ತವನ್ನು ಶೇಕಡ 8%ರ ಬಡ್ಡಿಯೊಂದಿಗೆ ಸದರಿ ನೌಕರರಿಂದ ಪೂರ್ಣವಾಗಿ ವಸೂಲಿ ಮಾಡುವಂತೆ ಆದೇಶಿಸಿರುತ್ತಾರೆ."

ಮೇಲೆ ಓದಲಾದ ಕ್ರಸಂ(1)ರ ಆದೇಶದ ವಿರುದ್ಧ ಶ್ರೀ ಕೆ.ಕೆ.ಪೂಣಚ್ಚ, ಗ್ರೇಡ್-2 ಕಾರ್ಯದರ್ಶಿ ಇವರು ಮೇಲೆ ಓದಲಾದ ಕ್ರಸಂ(2)ರಲ್ಲಿ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ಮೇಲ್ಮನವಿಯಲ್ಲಿನ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ-

- 2011-12ನೇ ಸಾಲಿನಲ್ಲಿ ಇಂದಿರಾ ಆವಾಜ್ ಯೋಜನೆಯಡಿ 22 ಮನೆಗಳು ಮಂಜೂರಾಗಿದ್ದು ಸದರಿ ಪಟ್ಟಿಯಲ್ಲಿ ಶ್ರೀಮತಿ ರಾಧಾ ಕೋಂ ಪ್ರಕಾಶ್‌ರವರು ಫಲಾನುಭವಿಯಾಗಿ ಆಯ್ಕೆಯಾಗಿರುತ್ತಾರೆ. ಫಲಾನುಭವಿಯಾಗಿ ಆಯ್ಕೆಯನ್ನು ಅಂದಿನ ಗ್ರಾಮ ಪಂಚಾಯತಿಯ ಚುನಾಯಿತ ಪ್ರತಿನಿಧಿಗಳ ಆಡಳಿತ ಮಂಡಳಿಯವರು ಪಂಚಾಯತಿ ಸಭೆಯಲ್ಲಿ ಮಾಡಿರುತ್ತಾರೆ. ತಾವು ಆ ಸಮಯದಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಕೂಡ ಕರ್ತವ್ಯದಲ್ಲಿದ್ದರು.

- ಫಲಾನುಭವಿಯಾಗಿ ಆಯ್ಕೆ ಪಟ್ಟಿಗೆ ಅಂದಿನ ಅಧ್ಯಕ್ಷರು ಮತ್ತು ಪಿಡಿಓರವರು ಸಹಿ ಮಾಡಿ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ರಾಜೀವ್ ಗಾಂಧಿ ವಸತಿ ನಿಗಮದ ಅನುಮೋದನೆ ಪಡೆದಿರುತ್ತಾರೆ.

- ರಾಜೀವ್ ಗಾಂಧಿ ವಸತಿ ನಿಗಮದಿಂದ ಪಟ್ಟಿ ಅನುಮೋದನೆಗೊಂಡು ಬಂದ ನಂತರ ಅಂದು ಕರ್ತವ್ಯ ನಿರ್ವಹಿಸುತ್ತಿದ್ದ ಪಿಡಿಓರವರು ಕಾರ್ಯಾದೇಶ ನೀಡಿ, ಮೊದಲ ಹಂತದ ಬಿಲ್ ಮೊತ್ತ ರೂ.12,000/-ಗಳನ್ನು ಪಾವತಿಸಿದ್ದರು. 2ನೇ ಮತ್ತು 3ನೇ ಹಂತದ ಬಿಲ್ ಮೊತ್ತ ರೂ.25,000/-ಗಳನ್ನು ತಾವು ಪ್ರಭಾರ ಪಿಡಿಓ ಆಗಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ನೀಡಿರುತ್ತೇನೆ. ಈ ಬಗ್ಗೆ ಪಂಚಾಯತ್ ಸಭೆಯಲ್ಲಿ ಮಂಡಿಸಿ ಘಟನೋತ್ತರ ಮಂಜೂರಾತಿಯನ್ನು ಪಡೆಯಲಾಗಿದೆ. ಇದನ್ನು ಮಂಡನಾಧಿಕಾರಿ ಪರಿಗಣಿಸಿರುವುದಿಲ್ಲ.

- ಶ್ರೀಮತಿ ರಾಧಾರವರು ಕೂಲಿ ಕಾರ್ಮಿಕರಾಗಿದ್ದು, 5 ಜನ ಮಕ್ಕಳು ಇದ್ದು, ಪತಿ ಕ್ಯಾನ್ಸರ್ ರೋಗ ಬಂದು ಮೃತಪಟ್ಟಿರುತ್ತಾರೆ. ಮಾನವೀಯತೆ ದೃಷ್ಟಿಯಿಂದ ತಮ್ಮ ಪತ್ನಿ ಜಾಗದ ದಾನ ಪತ್ರ ನೀಡಿರುತ್ತಾರೆ. ಗ್ರಾಮ ಪಂಚಾಯತ್ ಆಡಳಿತ ಮಂಡಳಿ ಶ್ರೀಮತಿ ರಾಧಾರವರ ಅರ್ಜಿಯನ್ನು ಒಪ್ಪಿ ನೊಂದಣಿ ಇಲಾಖೆಯಲ್ಲಿ ನೊಂದಾಯಿಸಿ ಪ್ರತಿ ಹಂತದ ಬಿಲ್ಲಿಗೂ, ಸಭೆಯ ಅನುಮೋದನೆ ನೀಡಿರುತ್ತಾರೆ.

- 2ನೇ ಆರೋಪಕ್ಕೆ ಸಂಬಂಧಿಸಿದಂತೆ 2011-12ನೇ ಸಾಲಿನ ಉದ್ಯೋಗ ಖಾತರಿ ಯೋಜನೆಯಲ್ಲಿ ತಮ್ಮ ಪತ್ನಿ ಸಾವಿತ್ರಿಯವರ ಮನೆಯ ಪಕ್ಕ ಸಾರ್ವಜನಿಕ ತೆರೆದ ಬಾವಿ ನಿರ್ಮಿಸಿರುವ ಬಗ್ಗೆ "ತಾವು ವಾಸವಾಗಿರುವ ಮನೆಯ ಸುತ್ತಲಿನ ಕುಟುಂಬಸ್ಥರು, ವಾರ್ಡಿನ ಸದಸ್ಯರು ಮತ್ತು ಅಧ್ಯಕ್ಷರಲ್ಲಿ ಸ್ಥಳೀಯವಾಗಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ತಿಳಿಸಿದ್ದು, ಎಲ್ಲಾರು ಸ್ಥಳ ಪರೀಕ್ಷಿಸಿ, ನನ್ನ ಮನೆಯು ಗದ್ದೆ ಪಕ್ಕದಲ್ಲಿದ್ದು, ಬಾವಿ ತೆರೆದರೆ ನೀರು ಸಿಗುವ ಖಚಿತತೆ ಇದ್ದುದ್ದರಿಂದ ಬಾವಿ ತೆಗೆಯುವಷ್ಟು ಜಾಗವನ್ನು ನೀಡುವಂತೆ ತಮ್ಮಲ್ಲಿ ಕೇಳಿಕೊಂಡ ಮೇರೆಗೆ 2011-12ನೇ ಸಾಲಿನ ಉದ್ಯೋಗ ಖಾತರಿ ಯೋಜನೆಯಲ್ಲಿ . ಸದರಿ ಕಾಮಗಾರಿಯನ್ನು ಅಳವಡಿಸಿ ಕ್ರಿಯಾ ಯೋಜನೆ ಅನುಮೋದನೆಗೊಂಡು, ಮಾರ್ಗಸೂಚಿಯಂತೆ ಕಾಮಗಾರಿಯನ್ನು ನಿರ್ವಹಿಸಲಾಗಿದೆ. ಇಂಜಿನಿಯರ್, ಪಿಡಿಓ, ಅಧ್ಯಕ್ಷರು, ವಾರ್ಡಿನ ಸದಸ್ಯರು ಕಾಮಗಾರಿ ಪರಿಶೀಲನಾ ನಡೆಸಿ ರೂ.49,294/-ಗಳನ್ನು ಈ ಅಳತೆ ಪುಸ್ತಕದಲ್ಲಿ ನಮೂದಿಸಿ ಪಾವತಿಸಲಾಗಿದೆ.

- 3ನೇ ಆರೋಪಕ್ಕೆ ಸಂಬಂಧಿಸಿದಂತೆ- ಮೋಟರ್/ಪಂಪು ದುರಸ್ಥಿ ಮತ್ತು ಪೈಪ್‌ಲೈನ್ ದುರಸ್ಥಿ ಕೆಲಸಗಳನ್ನು ನಿರ್ವಹಿಸಿದ ಸಂದರ್ಭ ಅಧ್ಯಕ್ಷರು ಮತ್ತು ಅಂದಿನ ಪಂಚಾಯತ್ ಅಭಿವೃದ್ಧಿಯವರು ಪ್ರಕಟಣೆಯನ್ನು ಹೊರಡಿಸಿ, ದರ ಪಟ್ಟಿಯನ್ನು ಪಡೆದು ತುಲನಾತ್ಮಕ ವರದಿಯನ್ನು ತಯಾರಿಸಿ ಸಹಿ ಮಾಡಿರುತ್ತಾರೆ ಹಾಗೂ ಕಾರ್ಯಾದೇಶಕ್ಕೆ ಸಹಿ ಮಾಡಿ ನೀಡಿರುತ್ತಾರೆ.

- ಸದರಿ ಕೆಲಸ ನಿರ್ವಹಿಸಿದ ಸಯ್ಯದ್ ಎಲೆಕ್ಟ್ರಿಕಲ್ಸ್‌ರವರಿಗೆ ಬಿಲ್ ಮೊತ್ತ ರೂ. 1,29,150/-ಅನ್ನು ಪಾವತಿಸಿದ್ದು, ಸಾಮಾನ್ಯ ಸಭೆಯಲ್ಲಿ ಮಂಡಿಸಿ ಘಟನೋತ್ತರ ಮಂಜೂರಾತಿ ಪಡೆಯಲಾಗಿದೆ.

- 4ನೇ ಆರೋಪಕ್ಕೆ ಸಂಬಂಧಿಸಿದಂತೆ, ಪಂಚಾಯತ್ ನಿಧಿಯಿಂದ ವಿದ್ಯುತ್ ಸಾಮಾಗ್ರಿಗಳ ಖರೀದಿ ರೂ.77,420/–, ರೂ. 1,25,000/–, ಗಳಿಗೆ ಸಂಬಂಧಿಸಿದಂತೆ ಖರೀದಿಯನ್ನು ಹಿಂದಿನ ಪಿಡಿಓ ಪ್ರಕಟಣೆ ಹೊರಡಿಸಿ ದರ ಪಟ್ಟಿಯನ್ನು ಪಡೆದು ತುಲನಾತ್ಮಕ ವರದಿಯನ್ನು ತಯಾರಿಸಿ ಸಹಿ ಮಾಡಿರುತ್ತಾರೆ ಹಾಗೂ ಕಾರ್ಯಾದೇಶಕ್ಕೆ ಸಹಿ ಮಾಡಿ ನೀಡಿರುತ್ತಾರೆ.

- ಸಾಮಾಗ್ರಿ ಖರೀದಿಗೆ ಸಂಬಂಧಿಸಿದಂತೆ ದಾಸ್ತಾನು ಮತ್ತು ವಿತರಣೆ ಪುಸ್ತಕದಲ್ಲಿ ದಾಖಲಿಸಿರುತ್ತಾರೆ. ಎಲ್ಲಾ ದಾಖಲೆಗಳಿಗೂ ಅಧ್ಯಕ್ಷರು ಮತ್ತು ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಸಹಿ ಮಾಡಿ ದೃಢೀಕರಿಸಿರುತ್ತಾರೆ. ತದನಂತರ ಬಿಲ್ ಪಾವತಿಸಿದ್ದು, ಇದಕ್ಕೆ ಪಂಚಾಯತ್ ಸಭೆಯಲ್ಲಿ ಘಟೋನ್ನೋತ್ತರ ಮಂಜೂರಾತಿಯನ್ನು ಪಡೆಯಲಾಗಿದೆ.

- 5ನೇ ಆರೋಪಕ್ಕೆ ಸಂಬಂಧಿಸಿದಂತೆ 13ನೇ ಹಣಕಾಸು ಯೋಜನೆಯಡಿ ರೂ.2,67,254/–ಗಳನ್ನು ದುರುಪಯೋಗದ ಬಗ್ಗೆ ತಾವು ಸದರಿ ಗ್ರಾಮ ಪಂಚಾಯತ್‌ನಲ್ಲಿ ದಿನಾಂಕ:05–03–2012 ರಿಂದ 08–04–2012ರವರೆಗೆ ರೂ.94,750/–ಗಳನ್ನು ಮಾತ್ರ ವೆಚ್ಚ ಮಾಡಿರುತ್ತೇನೆ. ಈ ಆರೋಪಗಳಿಂದ ತಮ್ಮನ್ನು ಮುಕ್ತಗೊಳಿಸುವಂತೆ ಕೋರಿರುತ್ತಾರೆ.

ದಿನಾಂಕ:01.06.2018ರಂದು ವಿಚಾರಣೆ ನಡೆಸಲಾಯಿತು. ಜಿಲ್ಲಾ ಪಂಚಾಯಿತಿಯಿಂದ ಈ ಪ್ರಕರಣದ ಬಗ್ಗೆ ಕಂಡಿಕಾವಾರು ಷರಾವನ್ನು ಸಲ್ಲಿಸುವಂತೆ ತಿಳಿಸಿ ಪ್ರಕರಣವನ್ನು ಮುಂದೂಡಲಾಗಿತ್ತು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೊಡಗು ಜಿಲ್ಲೆ ಇವರು ದಿನಾಂಕ:04.07.2018ರಂದು ಸರ್ಕಾರಕ್ಕೆ ಪಾಲನಾವರದಿಯನ್ನು ಸಲ್ಲಿಸಿದ್ದು, ಅದರಲ್ಲಿನ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.

- ವಿಚಾರಣಾ ಸಮಯದಲ್ಲಿ ಆರೋಪಿತ ನೌಕರರು ಶ್ರೀಮತಿ ರಾಧಾ ಕೋಂ ಪ್ರಕಾಶ್‌ರವರು ವಸತಿರಹಿತರ ಪಟ್ಟಿಯಲ್ಲಿರುವುದಿಲ್ಲ ಹಾಗೂ ಗ್ರಾಮಸಭೆಯಲ್ಲಿ ಆಯ್ಕೆಯಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಫಲಾನುಭವಿ ಆಯ್ಕೆ ಪ್ರಕ್ರಿಯೆ ಕುರಿತು ಅನುಮೋದನೆಯಾಗಿರುವ ಪಂಚಾಯಿತಿ ನಡಾವಳಿ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ ಮತ್ತು 2010ರಿಂದ 2012 ಮತ್ತು 2013ನೇ ಸಾಲಿನ ನಡಾವಳಿ ಪುಸ್ತಕಗಳು ಇರುವುದಿಲ್ಲವೆಂದು ವಿಚಾರಣಾ ಸಂದರ್ಭದಲ್ಲಿ ತಿಳಿಸಿರುತ್ತಾರೆ.

- 22 ಫಲಾನುಭವಿಯಳನ್ನು ಆಯ್ಕೆಮಾಡಲಾದ ಫಲಾನುಭವಿಗಳ ಪಟ್ಟಿಗೆ ಗ್ರಾಮ ಪಂಚಾಯತ್ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಾಹಕಅಧಿಕಾರಿರವರುಗಳು ಸಹಿಮಾಡಿರುತ್ತಾರೆ. ಶ್ರೀಮತಿ ಸಾವಿತ್ರಿರವರು ಶ್ರೀಮತಿ ರಾಧಾ ಕೋಂ ಪ್ರಕಾಶ್ ಇವರಿಗೆ ನೀಡಿದ ದಾನಪತ್ರವು ಉಪನೊಂದಾಣಾಧಿಕಾರಿಯವರ ಕಚೇರಿಯಲ್ಲಿ ನೊಂದಣಿಯಾಗಿರುವುದಿಲ್ಲ.

- ಆರೋಪ 3 ಮತ್ತು 4ಕ್ಕೆ ಸಂಬಂಧಿಸಿದಂತೆ, ಅಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿರವರು ಕಾರ್ಯದೇಶ ಹಾಗೂ ಮೊದಲ ಹಂತದ ಅಡಿಪಾಯ ಕಾಮಗಾರಿ ಮುಗಿದ ನಂತರ ರೂ.12,500/–ಗಳನ್ನು ಚೆಕ್ ಮೂಲಕ ಪಾವತಿಸಿರುತ್ತಾರೆ. ಆಯ್ಕೆ ಪ್ರಕ್ರಿಯೆನಿಯಮಾನುಸಾರ ನಡೆದಿಲ್ಲವೆಂಬ ಅಂಶವು ಗೊತ್ತಿದ್ದರೂ ಸಹ ಮೇಲಾಧಿಕಾರಿಗಳ ಗಮನಕ್ಕೆ ತಾರದೇ, ಉದ್ದೇಶಪೂರ್ವಕವಾಗಿ ಫಲಾನುಭವಿ ಹೆಸರಿಗೆ ಹಣಸಂದಾಯ ಮಾಡಿರುವುದನ್ನು ವಿಚಾರಣಾ ಸಂದರ್ಭದಲ್ಲಿ ತಿಳಿಸಿ ಒಪ್ಪಿ ಸಹ ಮಾಡಿರುತ್ತಾರೆ.

- ಶ್ರೀಮತಿ ರಾಧಾರವರಿಗೆ ನೀಡಲಾದ ದಾನಪತ್ರವನ್ನು ರಾಜೀವ್‌ಗಾಂಧಿ ವಸತಿ ನಿಗಮಕ್ಕೆ ನೀಡುವ ಮೂಲಕ ವಸತಿ ನಿಗಮದ ಫಲಾನುಭವಿಯನ್ನಾಗಿ ಆಯ್ಕೆ ಮಾಡಿಕೊಂಡು ವಸತಿ ಯೋಜನೆಯ ಮಾರ್ಗಸೂಚಿಗಳನ್ನು ಪಾಲಿಸದೇ ಕರ್ತವ್ಯಲೋಪ ಎಸಗಿರುತ್ತಾರೆ.

- 2ನೇ ಆರೋಪಕ್ಕೆ ಸಂಬಂಧಿಸಿದಂತೆ– ಸಾರ್ವಜನಿಕಬಾವಿ ನಿರ್ಮಾಣಕ್ಕೆ ಸಾರ್ವಜನಿಕರಿಂದಾಗಲೀ ಅಥವಾ ಗ್ರಾಮ ಪಂಚಾಯಿತಿ ವತಿಯಿಂದಾಗಲಿ ಬೇಡಿಕೆ/ಮನವಿ ಪತ್ರ ಬಂದಿರುವುದಿಲ್ಲ ಹಾಗೂ ಸದರಿ ಕಾಮಗಾರಿ ಗ್ರಾಮ ಪಂಚಾಯಿತಿಸಭೆಯಲ್ಲಿ ಅನುಮೋದನೆಗೊಂಡಿರುವ ಬಗ್ಗೆ ನಡಾವಳಿ ಪ್ರತಿಗಳು ಇರುವುದಿಲ್ಲ.

- ಸಂಬಂಧಿಸಿದ ಪ್ರಾಧಿಕಾರದಿಂದ ಅನುಮೋದನೆ ಪಡೆದ ಬಗ್ಗೆ ಮಾಹಿತಿ ಇರುವುದು ಕಂಡುಬಂದಿರುವುದಿಲ್ಲ. ಶ್ರೀಮತಿ ಸಾವಿತ್ರಿ( ಶ್ರೀ ಕೆ.ಕೆ.ಪೂಣಚ್ಚ ಇವರ ಪತ್ನಿ)ಇವರ ಸ್ಥಳದಲ್ಲಿ ಬಾವಿ ನಿರ್ಮಾಣ ಮಾಡಿದ್ದು, ಸಾರ್ವಜನಿಕ ಬಾವಿಯನ್ನು ಸ್ಥಳೀಯ ಗ್ರಾಮ ಪಂಚಾಯಿತಿಗೆ ಹಸ್ತಾಂತರ ಮಾಡದೇ ಸಾರ್ವಜನಿಕರ ಉಪಯೋಗಕ್ಕೆ ನೀಡದೇ ಕರ್ತವ್ಯಲೋಪ ಎಸಗಿರುತ್ತಾರೆ.
- 3ನೇ ಆರೋಪಕ್ಕೆ ಸಂಬಂಧಿಸಿದಂತೆ-ಗ್ರಾ.ಪಂ.ವರ್ಗ-1ರ ಅನುದಾನದಡಿ ರೂ.1,29150/-ಗಳ ಮೋಟರ್/ಪಂಪ್ ದುರಸ್ಥಿ, ಪೈಪಲೈನ್ ದುರಸ್ಥಿ ಹಾಗೂ ಹೊಸಪಂಪು.ಮೋಟರ್ ಖರೀದಿಯಲ್ಲಿ ಕೆ.ಟಿ.ಪಿ.ಪಿ ಕಾಯ್ದೆ 2000ದ ನಿಯಮಗಳನ್ನು ಪಾಲಿಸದೇ ಹಣ ದುರುಪಯೋಗ ಹಾಗೂ ಕರ್ತವ್ಯಲೋಪ ಎಸಗಿರುತ್ತಾರೆ.
- 4ನೇ ಆರೋಪಕ್ಕೆ ಸಂಬಂಧಿಸಿದಂತೆ-ಗ್ರಾ.ಪಂ.ವರ್ಗ-1ರ ಅನುದಾನದಡಿ ರೂ.77,420-/-ಗಳ ಬೀದಿದೀಪಸಾಮಾಗ್ರಿ ಹಾಗೂ ವಿದ್ಯುತ್ ಬಿಡಿಭಾಗಗಳ ಖರೀದಿಯಲ್ಲಿ ಕೆ.ಟಿ.ಪಿ.ಪಿ ಕಾಯ್ದೆ 2000ದ ನಿಯಮಗಳನ್ನು ಪಾಲಿಸದೇ ಹಣ ದುರುಪಯೋಗ ಹಾಗೂ ಕರ್ತವ್ಯಲೋಪ ಎಸಗಿರುತ್ತಾರೆ.
- 5ನೇ ಆರೋಪಕ್ಕೆ ಸಂಬಂಧಿಸಿದಂತೆ- 13ನೇ ಹಣಕಾಸುಯೋಜನೆಯಡಿ ರೂ.94,750/-ಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದು, ಯೋಜನೆಯ ಎಲ್ಲಾ ಮಾರ್ಗಸೂಚಿಗಳನ್ನು, ಕೆ.ಟಿ.ಪಿ.ಪಿ.ನಿಯಮ ಹಾಗೂ ಕರ್ನಾಟಕ ಆರ್ಥಿಕ ಸಂಹಿತೆಯನ್ನು ಉಲ್ಲಂಘಿಸಿರುತ್ತಾರೆ ಹಾಗೂ ಹಣ ದುರುಪಯೋಗ ಹಾಗೂ ಕರ್ತವ್ಯಲೋಪ ಎಸಗಿರುವುದನ್ನು ಒಪ್ಪಿಕೊಂಡು ಸಹಿ ಮಾಡಿರುತ್ತಾರೆ ಎಂದು ವರದಿ ನೀಡಿರುತ್ತಾರೆ.

ಈ ಮೇಲ್ಮನವಿಯ ಬಗ್ಗೆ ದಿನಾಂಕ:29.09.2018ರಂದು ವಿಚಾರಣೆ ನಡೆಸಲಾಯಿತು. ಸದರಿ ವಿಚಾರಣೆಗೆ ಅರ್ಜಿದಾರರು ಹಾಗೂ ಶ್ರೀ ಹೆಚ್.ಎಸ್.ಬಾಬು, ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಕೊಡಗು ಜಿಲ್ಲೆ ಹಾಗೂ ಶ್ರೀ ಬಿ.ವಿ.ಜಯಣ್ಣ, ಕಾರ್ಯನಿರ್ವಾಹಕ ಅಧಿಕಾರಿ, ವಿರಾಜಪೇಟೆ, ಕೊಡಗು ಜಿಲ್ಲೆರವರು ಹಾಜರಿದ್ದರು.

ಕರ್ನಾಟಕ ನಾಗರೀಕ ಸೇವಾ(ಸಿ.ಸಿ.ಎ)ನಿಯಮಗಳು 1957 ನಿಯಮ 25ರಡಿಯಲ್ಲಿ ಮೇಲ್ಮನವಿಯನ್ನು ಪರಿಶೀಲಿಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆ/ಕಡತಗಳನ್ನು ಹಾಗೂ ಹಾಜರಿದ್ದ ಎಲ್ಲರ ಹೇಳಿಕೆಗಳನ್ನು ಪರಿಶೀಲಿಸಲಾಗಿದೆ. ಶ್ರೀ ಕೆ.ಕೆ.ಪೂಣಚ್ಚ, ಕಾರ್ಯದರ್ಶಿ ಇವರು ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು ಸರ್ಕಾರದ ವಸತಿ ಹಾಗೂ ಎಂಜಿಎನ್ಆರ್ಇಜಿಎ ಯೋಜನೆಯ ಸೌಲಭ್ಯಗಳನ್ನು ತಮ್ಮ ಸ್ವಂತ ಉಪಯೋಗಕ್ಕಾಗಿ ಪಡೆದಿರುವುದು ಸಾಬೀತಾಗಿರುತ್ತದೆ. ಶ್ರೀಮತಿ ಸಾವಿತ್ರಿ ಕೋಂ ಕೆ.ಕೆ.ಪೂಣಚ್ಚರವರು ನೊಂದಣಿ ಮಾಡಿಸದೇ ವಸತಿಯೋಜನೆಯ ಫಲಾನುಭವಿಗೆ ಕೇವಲ ರೂ.5/- ಛಾಪಾಕಾಗದದಲ್ಲಿ ದಾನಪತ್ರವನ್ನು ಬರೆಸಿ, ಸರ್ಕಾರದ ವಸತಿಯೋಜನೆಯಡಿ ಉಪಯೋಗಪಡೆದುಕೊಂಡಿರುವುದನ್ನು ಗಮನಿಸಿದೆ. ಈ ಪ್ರಕರಣದಲ್ಲಿ ಎಲ್ಲಾ ವಾಸ್ತವಾಂಶಗಳನ್ನು ಪರಿಗಣಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸದರಿ ನೌಕರರಿಗೆ ವಿಧಿಸಿರುವ ದಂಡನಾದೇಶವು ಸಮಂಜಸವೆಂದು ಸರ್ಕಾರವು ನಿರ್ಣಯಿಸಿದೆ.
ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/223/ಗ್ರಾಪಂಕಾ/2018**
**ಬೆಂಗಳೂರು, ದಿನಾಂಕ:23-10-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ(ಸಿ.ಸಿ.ಎ)ನಿಯಮಗಳು 1957ರ ನಿಯಮ25(2)ರಡಿಯಲ್ಲಿ, ಶ್ರೀ ಕೆ.ಕೆ.ಪೂಣಚ್ಚ, ಗ್ರೇಡ್-2 ಕಾರ್ಯದರ್ಶಿ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(ಪ್ರಭಾರ)(ಪ್ರಸ್ತುತ ಕಡ್ಡಾಯ ನಿವೃತ್ತಿ), ಕಣ್ಣಂಗಾಲ ಗ್ರಾಮಪಂಚಾಯಿತಿ, ವಿರಾಜಪೇಟೆ, ಕೊಡಗು ಜಿಲ್ಲೆ ಇವರ ಮೇಲ್ಮನವಿಯನ್ನು ಪರಿಶೀಲಿಸಿದೆ. ಶ್ರೀ ಕೆ.ಕೆ.ಪೂಣಚ್ಚ, ಕಾರ್ಯದರ್ಶಿ ಇವರು ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು ಸರ್ಕಾರದ ವಸತಿ ಹಾಗೂ ಎಂಜಿಎನ್ಆರ್ಇಜಿಎ ಯೋಜನೆಯ ಸೌಲಭ್ಯಗಳನ್ನು ತಮ್ಮ ಸ್ವಂತ ಉಪಯೋಗಕ್ಕಾಗಿ ಪಡೆದಿರುವುದು ಸಾಬೀತಾಗಿರುವ ಹಿನ್ನೆಲೆಯಲ್ಲಿ, ವಸತಿಯೋಜನೆಯಡಿ ಶ್ರೀ ಕೆ.ಕೆ.ಪೂಣಚ್ಚರವರ ಪತ್ನಿಯವರು ದಾನ ನೀಡಿರುವ ಜಾಗವನ್ನು ಕೂಡಲೇ ಫಲಾನುಭವಿಯ ಹೆಸರಿಗೆ ನೊಂದಣಿಮಾಡಿಸಲು ಸೂಕ್ತಕ್ರಮಕೈಗೊಳ್ಳುವಂತೆ ಆದೇಶಿಸಿದೆ.

ಎಂಜಿಎನ್‌ಆರ್‌ಇಜಿಎ ಯೋಜನೆಯಡಿ ಶ್ರೀಮತಿ ಸಾವಿತ್ರಿ(ಶ್ರೀ ಕೆ.ಕೆ.ಪೂಣಚ್ಚರವರ ಪತ್ನಿ)ರವರ ಮನೆಯಪಕ್ಕ ನಿರ್ಮಾಣ ಮಾಡಿಕೊಂಡಿರುವ ಜಾಗವನ್ನು ಗ್ರಾಮಪಂಚಾಯಿತಿ ಹೆಸರಿಗೆ ನೊಂದಣಿ ಮಾಡಿಸಿಕೊಳ್ಳಲು ಕ್ರಮತೆಗೆದುಕೊಳ್ಳತಕ್ಕದ್ದು. ಮೇಲ್ಕಂಡ ಎರಡೂ ಜಾಗಗಳನ್ನು ನೊಂದಣಿಮಾಡಿಸಿಕೊಡಲು ಶ್ರೀ ಕೆ.ಕೆ.ಪೂಣಚ್ಚರವರು ಸಹಕಾರ ನೀಡದಿದ್ದಲ್ಲಿ, ನೀಡಿರುವ ಸೌಲಭ್ಯಗಳನ್ನು ರದ್ದುಗೊಳಿಸಿ, ಮನೆ ನಿರ್ಮಾಣ ಮಾಡಿರುವ ಜಾಗ ಹಾಗೂ ತೆರೆದ ಬಾವಿ ನಿರ್ಮಾಣಮಾಡಿರುವ ಜಾಗಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಿದೆ.

ಆಪಾದಿತ ನೌಕರರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಪ್ರಭಾರ ವಹಿಸಿಕೊಳ್ಳುವ ಮುಂಚೆ ಕಾರ್ಯನಿರ್ವಹಿಸಿದ್ದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಂದೀಶ್‌ಕುಮಾರ್‌ರವರ ವಿರುದ್ಧವೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸಿ ಶಿಸ್ತುಕ್ರಮ ತೆಗೆದುಕೊಳ್ಳುವಂತೆ ಆದೇಶಿಸಿದೆ. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಕೆ.ಕೆ.ಪೂಣಚ್ಚ, ಗ್ರೇಡ್-2 ಕಾರ್ಯದರ್ಶಿರವರ ವಿರುದ್ಧ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯವರು ವಿಧಿಸಿದ್ದ ದಂಡನಾದೇಶವನ್ನು ಎತ್ತಿಹಿಡಿಯಲಾಯಿತು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

23/11
(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಗಳು:

1) ಮಹಾಲೇಖಪಾಲರು(ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೊಡಗು ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.
4) ಶ್ರೀಕೆ.ಕೆ.ಪೂಣಚ್ಚ, ಗ್ರೇಡ್-2 ಕಾರ್ಯದರ್ಶಿ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(ಪ್ರಭಾರ)(ಪ್ರಸ್ತುತ ಕಡ್ಡಾಯ ನಿವೃತ್ತಿ), ಕಣ್ಣಂಗಾಲ ಗ್ರಾಮಪಂಚಾಯಿತಿ, ವಿರಾಜಪೇಟೆ, ಕೊಡಗು ಜಿಲ್ಲೆ.
5) ಗಣಕ ಕೋಶ.
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.